ಅಕ್ಷಯಕುಮಾರ ಎದ್ದು ಬಾಗಿಲು ತೆರೆದರೆ ಮಾವ ರಾಮಯ್ಯ ಆಳ್ವರು !! 'ಅರೆ ಮಾಮಣ್ಣ ! ಯಾವುದೇ ಸುದ್ದಿ ಕೊಡದೆ – ದಿಢೀರ್ ಪ್ರತ್ಯಕ್ಷ ಆಗಿದ್ದೀರಿ?' ಎಂದು ಬಲವಂತದ ನಗೆ ಅರಳಿಸಿಕೊಂಡು ಮಾವನನ್ನು ಪ್ರಶ್ನಿಸುತ್ತಲೇ, ಮನಸ್ಸಲ್ಲೇ ಯೋಚನೆಗೀಡಾಗಿದ್ದ. 'ಈಕೆಯೇ ಇವರನ್ನು ಫೋನ್ ಮಾಡಿ ಕರೆಸಿರಬಹುದೇ ?' ಎಂಬ ಯೋಚನೆಗೆ ಜಾರಿದ್ದ. ಅಷ್ಟರೊಳಗೆ ರಾಮಯ್ಯನವರೇ ತಮ್ಮ ಕೈಯಲ್ಲಿದ್ದ ಬ್ಯಾಗನ್ನು ಅಲ್ಲೇ ಇದ್ದ ದಿವಾನದ ಮೇಲಿಟ್ಟು ಅಂದರು : 'ಇಲ್ಲೇ ನಂಗೆ ನನ್ನ ಶಾಲೆಗೆ ಸಂಬಂಧಿಸಿದ್ದು... ಸ್ವಲ್ಪ ಕೆಲ್ಸ ಇತ್ತು. ನಮ್ಮ ಇವ್ಳದ್ದು (ಮಗುವಿನ ಅಜ್ಜಿಯದ್ದು) ಒಂದೇ ಕಿರಿ ಕಿರಿ. 'ಮತ್ತೆ ಮಗುವಿಗೆ ರಜೆ ಶುರುವಾಗುತ್ತೆ. ಅಚ್ಚುಗೆ ಬರುದಕ್ಕೆ ಪುರುಸೊತ್ತೆ ಇರವುದಿಲ್ಲ ; ಬರುವಾಗ ನೀವೇ ಅವ್ರನ್ನು ಕರೆತನ್ನಿ...' ಅಂತ ಹೇಳಿಯೇ ಬಿಟ್ಟಿದ್ದಾಳೆ ನಿಮ್ಮತ್ತೆ..."

'ಹೌದಾ... ಏನ್ಮಾಡೋದು ಮಾವ?... ಮಕ್ಕಳ ವಿದ್ಯಾಭ್ಯಾಸ ಎಲ್ಲಕ್ಕಿಂತಲೂ ಮುಖ್ಯ ಅಲ್ವಾ ? ನೀವೇ ಒಂದು ಶಾಲೆಯ ಹೆಡ್‌ಮಾಸ್ಟ್ರು. ನಿಮ್ಗೆ ನಾನೇನೂ ಹೇಳ್ಬೇಕಾಗಿಲ್ಲ. ಕೌಶಿಕನನ್ನು ಐಸಿಎಸ್ಸಿ ಸಿಲಬಸ್ ಇರುವ ಶಾಲೆಗೆ ಸೇರಿಸಬೇಕಂತಿದ್ದೇನಿ. ಈ ಕಾಲದಲ್ಲಿ ಸ್ಟೇಟ್ ಸಿಲಬಸ್, ಸಿಬಿಎಸ್ಸಿಗೆ ಏನೇನೂ ಬೆಲೆಯಿಲ್ಲ. ಸಾಫ್ಟ್‌ವೇರ್, ಮೆಡಿಸಿನ್ ಸೇರಿಸಬೇಕಾದ್ರೆ ಐಸಿಎಸ್ಸಿ ಶಾಲೆ ಬೇಕೇ ಬೇಕು ; ಐಸಿಎಸ್ಸಿ ಶಾಲೆ ಬೇಕಂದ್ರೆ ಅವನು ಎಂಟ್ರನ್ಸ್ ಬರಿಲೇಬೇಕು. ಅದಕ್ಕೆ ಅವನನ್ನು ರೆಡಿ ಮಾಡ್ಬೇಕು ನಾನು. ಅದಕ್ಕೇ ಈ ಸಲ ಇವ್ರನ್ನು ರಜೆಯಲ್ಲಿ ಊರಿಗೆ ಕಳಿಸಕ್ಕಾಗಲ್ಲ...'

ಶಾಲೆಯ ಮಾಸ್ಟ್ರಾಗಿ ಮೂವತ್ತು ವರ್ಷದ ಅನುಭವ ಪಡೆದುಕೊಂಡಿರುವ ರಾಮಯ್ಯ ಆಳ್ವರಿಗೆ ಈತನ ಮಾತು ಕೇಳಿ ಸಿಟ್ಟು ಬರುವ ಬದಲು ನಿಜಕ್ಕೂ ನಗು ಬಂದಿತ್ತು.

ಯಾವುದೇ ಮಗುವಿನ ಬೌದ್ಧಿಕ ವಿಕಾಸ ಹೇಗೆ? ಯಾವ ಹಂತದಲ್ಲಿ ಮಗುವು, ಏನನ್ನು, ಎಷ್ಟನ್ನು, ಹೇಗೆ ಕಲಿಯಬೇಕು ಮತ್ತು ಮಗುವಿಗೆ ಹೇಗೆ ಕಲಿಸಬೇಕು? ಎಂಬುದನ್ನು ಒಬ್ಬ ತಂದೆಯಾಗಿ ಹಾಗೂ ವೃತ್ತಿ ಅನುಭವದಿಂದ 'ಸತ್ಯವನ್ನು' ಕಂಡುಕೊಂಡಿದ್ದ ರಾಮಯ್ಯನವರು, ಅಳಿಯನಿಗೆ ಅಂದೇ ಬಿಟ್ರು: 'ಅಲ್ಲ ಮಾರಾಯ... ನಿನ್ನ ಮಗನೇನು... ಎಂಬಿಬಿಎಸ್ ಎಂಟ್ರನ್ಸ್ ಬರೆಯೋದು ಅಲ್ವಲ್ಲ. ಅವನನ್ನು ಪ್ರವೇಶ ಪರೀಕ್ಷೆಗೆ ನಾನು ರೆಡಿ ಮಾಡಿಸ್ತೇನೆ; ಅವನು ಓದಬೇಕಾದ ಪುಸ್ತಕಗಳನ್ನೆಲ್ಲ ಕೊಟ್ಟು ನನ್ನ ಜೊತೆ ಕಳಿಸು.'

'ಇಲ್ಲ ಮಾವ... ಆ ಐಸಿಎಸ್ಸಿ ಶಾಲೆಯ ಪ್ರವೇಶ ಪರೀಕ್ಷೆ ತುಂಬವೇ ಟಫ್. ನಾನು ಸೈಟ್‌ಗಂತ ಕೂಡಿಟ್ಟ ಒಂದಷ್ಟು ಹಣವನ್ನು ಡೊನೇಷನ್ ಕೊಡಲು ರೆಡಿ ಇದ್ದರೂ... 'ಮೊದ್ಲು ಎಂಟ್ರನ್ಸ್ ಬರೆಸಿ, ಅದನ್ನು ಪಾಸಾದ ಮೇಲೆ ಡೊನೇಷನ್ ವಿಚಾರ' ಎಂದಂದು ಬಿಟ್ರು. ಐಸಿಎಸ್ಸಿ ಸಿಲಬಸ್‌ಗೆ ಇವನನ್ನು ರೆಡಿ ಮಾಡೋ ಕ್ರಮ ನಿಮ್ಗೆಲ್ಲ ಗೊತ್ತಾಗಲ್ಲ ಬಿಡಿ...'

ಅಳಿಯನ ಮಾತು ಕೇಳಿ ಮಾವನ ಪಿತ್ತ ನೆತ್ತಿಗೇರಿತ್ತು. ಆದರೂ ಅದನ್ನು ಮಗಳ ಕಾರಣಕ್ಕಾಗಿ ಮುಖಭಾವದಲ್ಲಿ ಪ್ರಕಟಿಸದೆ, 'ಅಂದ್ರೆ ಜಗತ್ತಲ್ಲಿರುವ ಜ್ಞಾನವನ್ನೆಲ್ಲ ಆ ಐಸಿಎಸ್ ಸಿಲಬಸ್ ಶಾಲೆಗಳೇ ಕಬಳಿಸಿಕೊಂಡು ಕೂತು ಬಿಟ್ಟಿದ್ಯೋ ಹೇಗೆ!?...' ಎಂದು ಕೇಳಿಯೇ ಬಿಟ್ಟಿದ್ದರು.

ಅಕ್ಷಯಕುಮಾರನಿಗೆ ಕುಂಡೆಗೆ ಚೇಳು ಕಡಿದಂತಾಗಿ, ಅದಕ್ಕೆ ಉತ್ತರಿಸದೆ, 'ಬನ್ನಿ ಮಾಮ ಒಳಗೆ' ಎಂದಷ್ಟೇ ಹೇಳುತ್ತ ಸ್ನಾನದ ಮನೆಗೆ ನುಗ್ಗಿ ಬಿಟ್ಟಿದ್ದ.

ಒಳಗಡೆ ಮಗಳು ಮಲಗಿದ್ದ ಕೋಣೆಗೆ ಬಂದಾಗ ಮಂಚದ ಮೇಲೆ 'ಕೊಯ್ದಿಸೆದ ಕೆಸುವಿನೆಲೆಗಳ ತೊಪ್ಪೆಯಂತೆ' ಬಿದ್ದಿದ್ದ ಮಗುವನ್ನು ಕಂಡು ರಾಮಯ್ಯನವರಿಗೆ ಕಣ್ಣೀರು ಉಕ್ಕಿ ಬಂದಿತ್ತು. ಮಂಚಕ್ಕೆ ಒರಗಿ ಅರೆಮಂಪರಲ್ಲಿದ್ದ ಕುಮದಳ ಬೆನ್ನಿಗೆ ಮೆದುವಾಗಿ ತಟ್ಟಿ